# 'ನಾನು' ಅಂದರೆ ಏನು? ಯಾರು?

'ನಾನು' ಅಂದರೆ ಯಾರು? 'ನಾನು' ಅಂದರೆ ಏನರ್ಥ? ಇದು ಅತಿ ಪುರಾತನ ಪ್ರಶ್ನೆ! ಇದರ ಬಗ್ಗೆ ಎಲ್ಲ ದೇಶಕಾಲಗಳ ಚಿಂತಕರು ಜಿಜ್ಞಾಸೆ ನಡೆಸಿದ್ದಾರೆ. ಆ ಜಿಜ್ಞಾಸೆ ಆ ಕಾಲಘಟ್ಟ ಸಂದರ್ಭಕ್ಕನುಗುಣವಾಗಿ ಪಾರ್ಶ್ವ ಸತ್ಯ ಅಥವಾ ಆ ಕಾಲಘಟ್ಟಕ್ಕೆ ಸೀಮಿತವಾದ ಅನುಭವ ಸತ್ಯವಾಗಿರುತ್ತದೆ. ಮುಂದೆ ಬಂದ ಚಿಂತಕರು ಈ ಸತ್ಯವನ್ನು ನಿರಾಕರಿಸುತ್ತಲೋ ಬೆಳೆಸುತ್ತಲೋ ಅಥವಾ ಸ್ಥಿರ ಸಾರ್ವಕಾಲಿಕ ಸತ್ಯವೆಂದು ಸಮರ್ಥಿಸುತ್ತಲೋ ಬಂದಿರುವುದನ್ನು ನಾವು ಗಮನಿಸಬಹುದು.

ನಮ್ಮಲ್ಲಿ 'ನಾನು' ಎಂದರೆ ಪರಮಾತ್ಮನೆಂದೂ, ಪರಮಾತ್ಮನ ಅಂಶವೆಂದೂ ಅರ್ಥ ಬಿಡಿಸಿದವರು ಇದ್ದಾರೆ. ಹಾಗೆಯೇ 'ನಾನು' ಎಂಬುದು ಪರಮಾತ್ಮನಾಗಲು ಎಂದಿಗೂ ಸಾಧ್ಯವಿಲ್ಲ; ಪರಮಾತ್ಮನೆಂಬುದು ಅತ್ಯುನ್ನತ ಶಕ್ತಿ. ಅದನ್ನು 'ಭಗವಂತ'ನೆಂದು ಕರೆಯಬೇಕು. 'ನಾನು' ಎಂಬುದು ಹುಟ್ಟುಸಾವಿನಿಂದ ತೊಳಲಾಡುವ ಜೀವ. ಇದು ಎಂದಿಗೂ ಭಗವಂತನನ್ನು ತಾನೆಂದು ಭಾವಿಸಲಾಗದು. ಅದು ತನ್ನ ಪಾಪಗಳನ್ನು ಕಳೆದುಕೊಂಡು, ಪುಣ್ಯ ಸಂಪಾದನೆ ಮಾಡಿ ಭಗವಂತನ ಸಾನ್ನಿಧ್ಯವನ್ನು ಪಡೆಯಬಹುದು. ಅಂದರೆ ಹುಟ್ಟು ಸಾವುಗಳ ಸರಪಳಿಯಿಂದ ತಪ್ಪಿಸಿಕೊಂಡು ಮೋಕ್ಷ ಪಡೆಯಬಹುದು. ಅದನ್ನು ಸ್ವರ್ಗಪ್ರಾಪ್ತಿ ಎಂತಲೋ, ಮುಕ್ತಿ ಎಂತಲೋ ಪರಿಭಾವಿಸಬಹುದು. ಈ ಬಗೆಯ ಸಿದ್ಧಾಂತವೂ ನಮ್ಮಲ್ಲಿದೆ. ಹಾಗೆಂದು ಬಗೆದರೆ, 'ನಾನು' ಎಂದರೆ ನಿಜವಾಗಲೂ ಏನು? ಕೇವಲ ಇಹಲೋಕದ ಅನುಭವ ಗ್ರಾಹ್ಯ ಗ್ರಹಿಕೆಗೆ ಮೀರಿದ, ಪರಲೋಕದ– ಪರಶಕ್ತಿಗಳ ಬಗೆಗೆ ಇರಬಹುದಾದ ಕಲ್ಪನೆಗಳಿಂದ 'ನಾನು' ಎಂಬುದನ್ನು ಅರ್ಥ ಮಾಡ ಹೊರಡುವುದು ಕೂಡ ವಾಸ್ತವ ಸತ್ಯದಿಂದ ಬಿಡಿಸಿಕೊಂಡ ನೆಲೆಯಾಗುವುದಿಲ್ಲವೆ? ಅದನ್ನು ಪರಲೋಕದಿಂದ ಬಂದ ಅಂಶವೆಂದು ಗುರುತಿಸಿ ಮತ್ತೆ ಅಲ್ಲಿಗೆ ಹೊರಡುವ ಅಂಶವೆಂದು ತಿಳಿದು ಅಷ್ಟು ಸುಲಭವಾಗಿ ಕೈತೊಳೆದುಕೊಳ್ಳಲಾಗುವುದಿಲ್ಲ. ಏಕೆಂದರೆ– ಸತ್ಯಸ್ಯ ಸತ್ಯವಾದ ಇಲ್ಲಿಯ ಬದುಕಿನಲ್ಲಿ ಅದರ ಅಸ್ತಿತ್ವದ ಮೀಮಾಂಸೆ ಮಾಡುವುದು ಮತ್ತು ಇಲ್ಲಿ ಅದರ ಇರುವಿಕೆಯ ಅರ್ಥ ಶೋಧಿಸುವುದು ಮುಖ್ಯವಾಗುತ್ತದೆ.

ಲೌಕಿಕಾರ್ಥದಲ್ಲಿ 'ನಾನು' ಎಂಬುದನ್ನು ವ್ಯಕ್ತಿಯ ಅಂತರ್ಗತದಲ್ಲಿರುವ ಅಹಂಕಾರವೆಂದು ಗುರುತಿಸುವವರೂ ಇದ್ದಾರೆ. ಕನಕದಾಸರ 'ನಾನು' ಹೋದರೆ ಹೋದೇನು' ಎಂಬ ದಂತಕತೆಯಲ್ಲಿ ಈ ಸಿದ್ಧಾಂತ ಪ್ರತಿಪಾದಿತವಾಗಿದೆ. 'ನಾನು' ಎಂಬುದನ್ನು 'ಅಹಂಕಾರ'ವೆಂದು ಪರಿಭಾವಿಸಿ, ಆ ಅಹಂಕಾರ ಮಾತ್ರದಿಂದ ಸಮಾಜಹಿತ ಮತ್ತು ಕುಟುಂಬ ಹಿತಕ್ಕೆ ಮಾರಕವಾಗಿ ವ್ಯಕ್ತಿ ನಡೆದುಕೊಂಡಾಗ ಅದು ಅಪರಾಧವೆಂದೂ ಜನವಿರೋಧಿ– ಅಮಾನವೀಯ ನಿಲುವೆಂದೂ ಕರೆಯಬಹುದು. ಈ ಬಗೆಯ ಅಹಂಕಾರ ಸ್ವಾರ್ಥಮೂಲದಿಂದ ಬರುವಂಥದ್ದು. ಇದನ್ನು ಯಾವುದೇ ಕಾರಣದಿಂದ ಗೌರವಿಸಲಾಗದು. ಕುಟುಂಬ ಮತ್ತು ಸಮಾಜ ಕಂಟಕವಾಗಿ ಎಲ್ಲವೂ ತನ್ನದು, ತನಗಾಗಿ ಎಂದು ಮೆರೆಯುವ ಮನಸ್ಥಿತಿಯನ್ನು ಅಹಂಕಾರವೆಂದು ಕರೆದು, ಅದು ಬಹುಬೇಗ ಕುಟುಂಬ ಮತ್ತು ಸಮಾಜದ ವಿರೋಧವನ್ನು ಕಟ್ಟಿಕೊಂಡು ನಾಶವಾಗುವ ಸ್ಥಿತಿಯೆಂದು ತಿಳಿಯಬೇಕು.

'ನಾನು' ಎಂಬುದನ್ನು ಅಷ್ಟು ಸರಳವಾಗಿ 'ಅಹಂಕಾರ'ದೊಡನೆ ಸಮೀಕರಿಸಿ ಅರ್ಥೈಸುವುದು ಕಷ್ಟವಾಗುತ್ತದೆ. ಈ 'ನಾನು' ಅಹಂಕಾರಕ್ಕಿಂತ ಭಿನ್ನವಾದ, ಸದಾ ವ್ಯಕ್ತಿಯ ಅಂತರ್ಗತದಲ್ಲೇ ಇರುವ ಮತ್ತ್ಯಾವುದೋ ಪ್ರತ್ಯಯವೆಂದು ತಿಳಿದು ಹುಡುಕ ಹೊರಡಬೇಕು.

ವ್ಯಕ್ತಿಯು ಬದುಕಿನಲ್ಲಿ ಸದಾ ಬಹು ಎಚ್ಚರದಿಂದ ಕಾಯ್ದುಕೊಳ್ಳಬೇಕಾದ ಒಂದು ವೈಯಕ್ತಿಕ ಮೌಲ್ಯವಿದೆ. ಅದನ್ನು ಸ್ವಾಭಿಮಾನವೆಂತಲೂ ಆತ್ಮಪ್ರತ್ಯಯವೆಂತಲೂ ಕರೆಯಬಹುದು. ಇದು ಅಹಂಕಾರವಲ್ಲ. ಈ ಸ್ವಾಭಿಮಾನವು ತನ್ನನ್ನು ಸದಾ ಇತರರ ಮಧ್ಯೆ ಇರುವಂತೆಯೂ, ಪರೋಪಕಾರ ಮನೋಧರ್ಮವನ್ನು ರೂಢಿಸಿಕೊಳ್ಳುವಂತೆಯೂ ಪ್ರೇರೇಪಿಸುತ್ತದೆ. ಹೀಗೆ ಇತರರ ನಡುವೆ ಇದ್ದೂ ತನ್ನತನವನ್ನು ಜೋಪಾನವಾಗಿ ಕಾಯ್ದುಕೊಳ್ಳುವ ಮತ್ತು ತನ್ನ ಗುರುತನ್ನು ಉಳಿಸಿಕೊಳ್ಳುವ ಎಚ್ಚರದ ಪ್ರಜ್ಞೆಯನ್ನು 'ನಾನು' ಎಂದು ಗುರುತಿಸಬೇಕು. ಈ ಬಗೆಯ ನಾನು ತುಂಬ ಎತ್ತರದ ಮನುಷ್ಯರಲ್ಲಿ ಕಾಣಬಹುದು. ಈ ಬಗೆಯ ಮನಸ್ಥಿತಿಯಿರುವವರು ಎಂಥ ಕಠಿಣ ಪರಿಸ್ಥಿತಿಯಲ್ಲೂ ತಾವು ನಂಬಿದ ಸಿದ್ಧಾಂತವನ್ನು ಬಿಟ್ಟುಕೊಡುವವರಲ್ಲ. ಇದು ಆತ್ಮ ಪ್ರತ್ಯಯವನ್ನು ಉಳಿಸಿಕೊಂಡು ಸತ್ಯಕ್ಕಾಗಿ ಹೋರಾಡುವ ಸಮಾಜ ಪರ ನಿಲುವು. ಸಾಕ್ರೆಟೀಸ್ ತನ್ನ ನಂಬಿದ ಸತ್ಯಕ್ಕಾಗಿ ಸ್ವಾಭಿಮಾನವನ್ನು ಕಳೆದುಕೊಳ್ಳದೆ ವಿಷ ಕುಡಿದು ಪ್ರಾಣ ತ್ಯಾಗ ಮಾಡುತ್ತಾನೆ. ಗೆಲಿಲಿಯೋ ಅದೇ ಕಾರಣಕ್ಕಾಗಿ ಗೃಹ ಬಂಧನದಲ್ಲೇ ತನ್ನ ಜೀವಿತಕಾಲವನ್ನು ಕಳೆಯುತ್ತಾನೆ. ಬುದ್ಧ ವೈಯಕ್ತಿಕ ಭೋಗವನ್ನು ತ್ಯಾಗ ಮಾಡಿ ಲೋಕ ಹಿತವನ್ನು ಶೋಧ ಮಾಡಿ ಹೊರಡುವುದು; ಅಶೋಕ ಯುದ್ಧ ತ್ಯಾಗಮಾಡಿ ಅಹಿಂಸೆಯ ಪ್ರಚಾರ ಮಾಡಹೊರಡುವುದು– ಇದೇ ನೆಲೆಯಿಂದ. ನಮ್ಮ ಆಧುನಿಕ ಯುಗದ ಗಾಂಧೀಜಿಯವರು ದೇಶಕ್ಕಾಗಿ ನಡೆಸಿದ ಸತ್ಯಪರ ಹೋರಾಟದಲ್ಲಿ ಈ ಆತ್ಮಪ್ರತ್ಯಯವೇ ತುಂಬಿಕೊಂಡಿದೆ. ಅವರ ಈ ಆತ್ಮಪ್ರತ್ಯಯವು ದೇಶ ಪ್ರೇಮ, ಬಿಡುಗಡೆಗಳೆಂಬ ಮೌಲ್ಯಗಳು ವಿಜೃಂಭಿಸದೇ ಹೋಗಿದ್ದಲ್ಲಿ ಅವರು ಬ್ರಿಟಿಷರ ಜೊತೆ ಅಧಿಕಾರಕ್ಕಾಗಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗಿತ್ತು. ಅವರ ಆತ್ಮಪ್ರತ್ಯಯದಲ್ಲಿ ಸ್ವಾರ್ಥ ಇಣುಕಿ ಅದು ಅಹಂಕಾರದ ರೂಪ ಪಡೆದಿದ್ದರೆ– ಸ್ವಾತಂತ್ರ್ಯ ಬರುವ ಸಂದರ್ಭದಲ್ಲಿ ತಾವೇ ಅಧಿಕಾರದ ಗದ್ದುಗೆ ಏರುವ ಆಸೆ ತೋರಬಹುದಿತ್ತು. ಆದರೆ ಅವರು ಆ ಎಲ್ಲಾ ಉಪಾಧಿಗಳನ್ನು ಮೀರಿ ನಿಂತಿದ್ದರು. ಅವರಲ್ಲಿದ್ದ 'ನಾನು' ಪ್ರತಿಯೊಬ್ಬ ಸಾಮಾನ್ಯ ಭಾರತೀಯನ ದಾಸ್ಯ ಬಿಡುಗಡೆಯ ಪ್ರತೀಕವಾಗಿ ರೂಪಾಂತರಗೊಂಡು ಬೆಳೆದಿತ್ತು.

ಈ ಬಗೆಯ 'ನಾನು' ಎಲ್ಲರಲ್ಲಿ ಅರಳಿ ಸ್ಥಾಪಿತವಾದಾಗ ಒಂದು ಸಮೃದ್ಧ ಸಮಾನ ಸಮಾಜ ನಿರ್ಮಾಣಗೊಳ್ಳುತ್ತದೆ.

■ ಶಿಕಾಕು

---

# ಮಾತೇ ಮುತ್ತು

★ ಬಚ್ಚಿಟ್ಟುಕೊಂಡು ಬದುಕುವುದು ನನಗಿಷ್ಟವಿಲ್ಲ. ಹಾಗಂತ ಎಲ್ಲವನ್ನೂ ಬಿಟ್ಟಿ ಹರಾಜಿಗಿಡುತ್ತೇನೆಂದು ಇದರರ್ಥವಲ್ಲ.

–ಜಿ.ಎಸ್.ಶಿವರುದ್ರಪ್ಪ

★ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ನಿಕೃಷ್ಟ ಜನಗಳೆಂದರೆ ಸತ್ಯವನ್ನು ಒಪ್ಪಲು ನಿರಾಕರಿಸಿದವರು.

–ಕುರಾನ್

★ ಯಶಸ್ಸಿನ ಹಿರಿಮೆಯನ್ನು ಒಬ್ಬ ಗಳಿಸಿದ ಸ್ಥಾನಮಾನಗಳಿಂದ ಅಳೆಯುವುದಕ್ಕಿಂತ, ಆ ಹೋರಾಟದಲ್ಲಿ ಅವನು ಎದುರಿಸಿದ ವಿಘ್ನ ಪರಂಪರೆಗಳಿಂದ ಅಳೆಯುವುದು ಸೂಕ್ತ.

–ಬೂಕರ್ ವಾಷಿಂಗ್ಟನ್

★ ವಿದ್ಯಾವಂತನಿಗೂ ಅವಿದ್ಯಾವಂತನಿಗೂ ಇರುವ ವ್ಯತ್ಯಾಸ– ಜೀವಿಗೂ ನಿರ್ಜೀವಿಗೂ ಇರುವಷ್ಟೆ ಆಗಿರುತ್ತದೆ.

–ಅರಿಸ್ಟಾಟಲ್

★ ದಡ್ಡನಾದರೂ ಮೌನದಿಂದಿದ್ದರೆ ಸಾಕು– ಅವನು ಜಾಣನೆಂದು ಇತರರು ತಿಳಿಯುತ್ತಾರೆ.

–ಪಬ್ಲಿಯಸ್ ಸೈರಸ್

★ ಜೀವನವೆಲ್ಲಾ ಬೇವು ಬೆಲ್ಲ; ಎರಡೂ ಸವಿದವನೆ ಕವಿ ಮಲ್ಲ.

–ಕುವೆಂಪು

★ ಅಮ್ಮನ ಪ್ರೀತಿ ದೊಡ್ಡದು, ಅಪ್ಪನ ಪ್ರೀತಿ ಕಾಣದು.

–ಸಿನಿಮಾ ಗಾದೆ

★ ಪ್ರಕೃತಿಯನ್ನು ಬಹುವಿಧದಲ್ಲಿ ನೋಡುವುದರಿಂದ ಕಲಾವಿದನಿಗೆ ಅನೇಕ ಬಗೆಯ ವೈವಿಧ್ಯತೆಯ ಅರಿವಾಗುತ್ತದೆ.

–ಆರ್.ಎಂ.ಹಡಪದ

★ ಯಶಸ್ಸು ನೀರಿನಲ್ಲಿನ ವೃತ್ತದಂತೆ. ಅತಿ ವಿಸ್ತಾರದಿಂದ ನಾಶವಾಗುವವರೆಗೂ ಅದು ವಿಸ್ತಾರವಾಗುವುದನ್ನು ನಿಲ್ಲಿಸದು.

–ಶೇಕ್ಸ್‌ಪಿಯರ್

★ ಮಾವು ನಾವು, ಬೇವು ನಾವು; ನೋವು ನಲಿವು ನಮ್ಮವು. ಹೂವು ನಾವು, ಹಸಿರು ನಾವು; ಬೇವು ಬೆಲ್ಲ ನಮ್ಮವು.

–ಕೆ.ಎಸ್.ನರಸಿಂಹಸ್ವಾಮಿ